NP – 020

## ನಾಲ್ಕನೇ ಸೆಮಿಸ್ಟರ್ ಬಿ.ಬಿ.ಎ. ಪರೀಕ್ಷೆ, ಜುಲೈ/ಆಗಸ್ಟ್ 2024
## (NEP)
## ಕನ್ನಡ
## Paper – IV : ವ್ಯವಹಾರ ನಿರ್ವಹಣಾ ಕನ್ನಡ – 4

ಸಮಯ : 2½ ಗಂಟೆಗಳು ಗರಿಷ್ಠಾಂಕಗಳು : 60

I. ಎರಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (ಇನ್ನೂರು ಪದಗಳಿಗೆ ಮೀರದಂತೆ). (2×10=20)

1) ಅಧಿಕಾರ ರಾಜಕಾರಣದ ಮುಖಗಳನ್ನು ಭರತ ಬಾಹುಬಲಿ ಸಂಘರ್ಷ ಪ್ರತಿನಿಧಿಸುವ ಬಗೆಯನ್ನು ವಿವರಿಸಿ.

2) ಲೋಹಿಯಾ ಮತ್ತು ಜಯಪ್ರಕಾಶ್ ನಾರಾಯಣರ ಬಗ್ಗೆ ಕಮಲಾದೇವಿ ಅವರಿಗೆ ಇದ್ದ ಅಭಿಪ್ರಾಯ ಎಂಥದ್ದು ? ವಿವರಿಸಿ.

3) ಯುದ್ಧ ಮತ್ತು ಶಾಂತಿಗಳ ನಡುವೆ ನಿಮ್ಮ ಆಯ್ಕೆ ಯಾವುದು ? ಯಾಕೆ ? ವಿವರಿಸಿ.

II. ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (ನೂರು ಪದಗಳಿಗೆ ಮೀರದಂತೆ). (4×5=20)

1) ಹಿಂಸೆಯ ಕಲ್ಪನೆಯನ್ನು 'ಹಿಂಸೆ ಮತ್ತು ಅಹಿಂಸೆಗಳ ಬಹುರೂಪಗಳು' ಲೇಖನದ ಹಿನ್ನೆಲೆಯಲ್ಲಿ ವಿವರಿಸಿ.

2) ಜಪಾನಿಯರ ದೃಷ್ಟಿಯಲ್ಲಿ ದೇಶಪ್ರೇಮ ಎಂದರೇನು ?

3) ಕಮಲಾದೇವಿಯವರ ಕುಟುಂಬದ ಹಿನ್ನೆಲೆಯನ್ನು ಕುರಿತು ಬರೆಯಿರಿ.

4) ಷಾಜಿ ಮತ್ತು ಶಿವಾಜಿಯ ನಡುವಣ ಸಂಬಂಧವನ್ನು ಕುರಿತು ಬರೆಯಿರಿ.

5) ನಾಗಮ್ಮ ಏಕಾಂಗಿಯಾಗಿ ಯೋಚಿಸುತ್ತಿದ್ದ ರೀತಿಯನ್ನು ಕುರಿತು ಬರೆಯಿರಿ.

6) 'ಸಾಂಪ್ರದಾಯಿಕ ಕೃಷಿಯ ಜೊತೆಗೆ ಹೈನುಗಾರಿಕೆ ಒಂದೇ ಗ್ರಾಮೀಣ ಆರ್ಥಿಕತೆಗೆ ಬಲ' – ಚರ್ಚಿಸಿ.

III. ಕೆಳಕಂಡ ಕಂಡಿಕೆಯನ್ನು ಇಂಗ್ಲಿಷ್‌ಗೆ ಭಾಷಾಂತರಿಸಿ. (1×4=4)

ದಕ್ಷಿಣ ಆಫ್ರಿಕಾದ ಟ್ರಾನ್ಸ್‌ವಾಲ್ ಪ್ರದೇಶದ ಸರ್ಕಾರ ಇಂಡಿಯಾದಿಂದ ವಲಸೆ ಬಂದವರಿಗೆ ಮತದಾನದ ಹಕ್ಕೂ ಸೇರಿದಂತೆ ಹಲವು ಹಕ್ಕುಗಳನ್ನು ಮೊಟಕು ಮಾಡಿತು. ಈ 'ಬ್ಲ್ಯಾಕ್ ಆ್ಯಕ್ಟ್' ವಿರೋಧಿಸಲು ಭಾರತೀಯರು ತೀರ್ಮಾನಿಸಿದರು. ಆಗ ಗಾಂಧೀಜಿ 'ಇಡೀ ಪ್ರತಿಭಟನೆ ಶಾಂತಿಯುತವಾಗಿರಬೇಕು; ನನ್ನ ಪ್ರಕಾರ ಅಹಿಂಸೆಯೆನ್ನುವುದು ಆಲೋಚನೆ, ನಡೆನುಡಿಗಳಲ್ಲಿಯೂ ಇರಬೇಕು; ಅಹಿಂಸೆಯೆಂದರೆ ಇನ್ನೊಬ್ಬರಿಗೆ ನೋವುಂಟು ಮಾಡುವ ಬಯಕೆಯೇ ಇರಬಾರದು ಎಂದರ್ಥ' ಎಂಬ ಖಚಿತ ಸಂದೇಶದೊಂದಿಗೆ ಚಳುವಳಿ ಶುರು ಮಾಡಿದರು.

IV. ಕರ್ನಾಟಕ ಬ್ಯಾಂಕ್‌ನಲ್ಲಿನ ಮ್ಯಾನೇಜರ್ ಹುದ್ದೆಗೆ ಅರ್ಜಿ ಮತ್ತು ಅಭ್ಯರ್ಥನ ಪತ್ರ ಬರೆಯಿರಿ. (1×4=4)

P.T.O.

V. ಕೆಳಕಂಡ ಚಿತ್ರ/ಸನ್ನಿವೇಶ ಆಧರಿಸಿ ಒಂದು ಕವಿತೆ/ಕತೆ ಬರೆದು ಸೂಕ್ತ ಶೀರ್ಷಿಕೆ ನೀಡಿ (90 ಪದಗಳಿಗೆ ಮೀರದಂತೆ). (1×4=4)

ಸನ್ನಿವೇಶ : ರಸ್ತೆ ಕಾಮಗಾರಿಯಲ್ಲಿ ಬಾಲಕಾರ್ಮಿಕರನ್ನು ದುಡಿಸಿಕೊಳ್ಳಲಾಗುತ್ತಿದೆ.

VI. ಕೆಳಕಂಡ ಗದ್ಯ ಕಂಡಿಕೆಯನ್ನು ಸಂಭಾಷಣೆಯಾಗಿ ಪರಿವರ್ತಿಸಿ. (1×4=4)

ತನ್ನಮ್ಮನ ಕೈ ಹಿಡಿದುಕೊಂಡು ದೂರದಿಂದಲೇ ಗಾಂಧೀಜಿಯವರನ್ನು ನೋಡಿ ಅವರ ಮಾತಿನ ಮೋಡಿಗೆ ಪ್ರಭಾವಿತಳಾಗಿದ್ದ ಕಮಲಾದೇವಿ ಗಾಂಧೀಜಿಯ ಕುರಿತು ಅವರ ಕಾರ್ಯತಂತ್ರದ ಕುರಿತು ತಿಳಿದುಕೊಳ್ಳಲು ಆರಂಭಿಸಿದರು. ಸಮಾಜದ ಕಡುಬಡವರ ಮತ್ತು ದೀನದಲಿತರ ಪರ ಹೋರಾಡುವ ಗಾಂಧೀಜಿ ಕಮಲಾದೇವಿಗೆ ಇಷ್ಟವಾದರು. ಸ್ತ್ರೀಯರನ್ನು ಗೌರವಿಸಿ ಅವರ ಸಾರ್ವಜನಿಕ ಅಧಿಕಾರಕ್ಕಾಗಿ ಹೋರಾಟ ನಡೆಸಿದ ಗಾಂಧೀಜಿ, ದೇಶದ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಸಂದರ್ಭೋಚಿತವಾಗಿ ಕಾರ್ಯಕ್ರಮಗಳನ್ನು ನಡೆಸುತ್ತಿದ್ದ ಗಾಂಧೀಜಿ, ಹಿಂಸೆಯನ್ನು ತ್ಯಜಿಸಿ ಸತ್ಯ ಮತ್ತು ಅಹಿಂಸಾತ್ಮಕ ಚಳುವಳಿಗಳಿಗೆ ಕರೆಕೊಟ್ಟ ಗಾಂಧೀಜಿಯನ್ನು ಕಮಲಾದೇವಿ ಗೌರವಿಸಿದರು. ಅವರ ಈ ಸತ್ಕಾರ್ಯಗಳಲ್ಲಿ ತಾನೂ ಭಾಗವಹಿಸುವ ಕನಸು ಕಂಡರು.

VII. ಇವುಗಳಿಗೆ ಒಂದೊಂದು ಸರಿ ಉತ್ತರವನ್ನು ಗುರುತಿಸಿ ಬರೆಯಿರಿ. (4×1=4)

1) ಯಾವ ದಿನವನ್ನು ಅಂತಾರಾಷ್ಟ್ರೀಯ ಅಹಿಂಸಾ ದಿನವನ್ನಾಗಿ ಆಚರಿಸಲಾಗುತ್ತದೆ ?

ಎ) ಆಗಸ್ಟ್ 02 ಬಿ) ಅಕ್ಟೋಬರ್ 31

ಸಿ) ಅಕ್ಟೋಬರ್ 02 ಡಿ) ಅಕ್ಟೋಬರ್ 10

2) 'ಅಜ್ಞಾತವಾಸಿ' ಲೇಖನವನ್ನು ಬರೆದವರು ಯಾರು ?

ಎ) ಬಸವರಾಜ ಬಿ) ಬಸವರಾಜಕಟ್ಟೀಮನಿ

ಸಿ) ಬೆಸಗರಹಳ್ಳಿ ರಾಮಣ್ಣ ಡಿ) ಬಸವರಾಜ ಸಬರದ

3) ಶಿವಾಜಿಯ ತಂದೆ ಯಾರು ?

ಎ) ಷಹ ಬಿ) ಸುಲ್ತಾನ

ಸಿ) ಷಾಜಿ ಡಿ) ಧಿರೋಜಿ

4) ಚಕ್ರೇಶ ಯಾರು ?

ಎ) ಬಾಹುಬಲಿ ಬಿ) ಭರತ

ಸಿ) ಆದಿದೇವ ಡಿ) ಪಂಪ

---